**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಸಿ.ನಂ. 484/2023**

| | | |
|---|---|---|
| ಸಾಕ್ಷಿದಾರರ ಹೆಸರು | : | ಜಶೀಲ |
| ಗಂಡನ ಹೆಸರು | : | ಮುನೀರ್ ಪಾಷಾ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಆಪ್ತ ಸಮಾಲೋಚಕಿ, ಮಹಿಳಾ ಸಾಂತ್ವನ ಕೇಂದ್ರ, ಹೆಚ್.ಡಿ. ಕೋಟೆ. |
| ವಾಸಸ್ಥಳ | : | ಹೆಚ್.ಡಿ. ಕೋಟೆ ಟೌನ್. |

**ಸಾಕ್ಷಿಯನ್ನು ದಿನಾಂಕಃ 07.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎ.ಪಿ.ಪಿ. ರವರಿಂದಃ**

ನಾನು ಕಳೆದ 10 ವರ್ಷಗಳಿಂದ ಮಹಿಳಾ ಸಾಂತ್ವನ ಕೇಂದ್ರ, ಹೆಚ್.ಡಿ. ಕೋಟೆ ಇಲ್ಲಿ ಆಪ್ತ ಸಮಾಲೋಚಕಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಚಾಸಾ-2 ರಿಂದ ಚಾಸಾ-9 ರವರನ್ನು ನೋಡಿ ಪರಿಚಯವಿರುತ್ತದೆ. ದಿನಾಂಕಃ 09.04.2022 ರಂದು ಬೆಳಿಗ್ಗೆ ಸುಮಾರು 08.30 ಗಂಟೆಗೆ ನಾನು ಮನೆಯಲ್ಲಿರುವಾಗ ಸಾರ್ವಜನಿಕರೊಬ್ಬರು ಕರೆ ಮಾಡಿ ದಿನಾಂಕಃ 05.04.2022 ರಂದು 1 ನೇ ಆರೋಪಿಗೆ ಹೆಚ್.ಡಿ. ಕೋಟೆಯ ಸರ್ಕಾರಿ ಆಸ್ಪತ್ರೆಯಲ್ಲಿ ಹೆಣ್ಣು ಮಗುವಿಗೆ ಜನ್ಮ ನೀಡಿರುವುದಾಗಿ ಹಾಗು ದಿನಾಂಕಃ 07.04.2022 ರಂದು ಸದರಿ ಮಗುವನ್ನು 1 ನೇ ಆರೋಪಿ

ಯಾರಿಗೋ ಮಾರಿರುವುದಾಗಿ ಮಾಹಿತಿ ನೀಡಿರುತ್ತಾರೆ. ನಾನು ಸದರಿ ವಿಚಾರವನ್ನು ನಮ್ಮ ಮೇಲಾಧಿಕಾರಿಗಳಿಗೆ ತಿಳಿಸಿದ್ದು, ಅದಕ್ಕೆ ಅವರು ಸ್ಥಳಕ್ಕೆ ಹೋಗಿ ಪರಿಶೀಲಿಸುವಂತೆ ನಿರ್ದೇಶನ ನೀಡಿರುತ್ತಾರೆ. ಆ ಪ್ರಕಾರ ನಾನು ಅದೇ ದಿನ 1 ನೇ ಆರೋಪಿಯ ಮನೆಗೆ ಹೋಗಿ 1 ನೇ ಆರೋಪಿಯ ಜೊತೆ ಸಮಾಲೋಚನೆ ಮಾಡಿದ್ದು ಆಗ ಆಕೆ ತಾನು ಮಗುವನ್ನು ಮಾರಾಟ ಮಾಡಿರುವುದಿಲ್ಲ, ಅದನ್ನು ತನ್ನ ನೆಂಟರ ಮನೆಗೆ ಕೊಟ್ಟಿರುವುದಾಗಿ ತಿಳಿಸಿರುತ್ತಾರೆ. ನಂತರ ನಾನು ಆಕೆಯನ್ನು ತಕ್ಷಣ ಮಗುವನ್ನು ಕರೆಸುವಂತೆ ತಿಳಿಸಿದ್ದು, ಆಕೆ ನಾನು ತಿಳಿಸಿದ ಸುಮಾರು 01 ಗಂಟೆಯ ನಂತರ ಮಗವನ್ನು ತರಿಸಿರುತ್ತಾರೆ. ನಂತರ ಈ ಬಗ್ಗೆ ನಾನು ಮಕ್ಕಳ ಕಲ್ಯಾಣ ಸಮಿತಿಗೆ ವರದಿ ನೀಡಿ ಮಗುವನ್ನು ರಕ್ಷಣೆ ಮಾಡಿರುತ್ತೇವೆ. ನಂತರ ನಾನು ಈ ಬಗ್ಗೆ ಆರೋಪಿತರ ವಿರುದ್ಧ ಪೋಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದು ತಾನು ಮೇಲೆ ಹೇಳಿದಂತೆ ನೀಡಿದ ದೂರು ಎಂದು ಗುರುತಿಸಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ದೂರನ್ನು **ನಿ.ಪಿ.-1** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.-1(ಎ)** ಎಂದು ಗುರುತಿಸಲಾಯಿತು. ನಂತರ ಮರುದಿನ ಅಂದರೆ ದಿನಾಂಕಃ 10.04.2022 ರಂದು ಪೋಲೀಸರು ನನ್ನನ್ನು ಕೃತ್ಯ ಸ್ಥಳಕ್ಕೆ ಅಂದರೆ 1 ನೇ ಆರೋಪಿಯ ಮನೆಗೆ ಕರೆಸಿದ್ದು, ಅಲ್ಲಿ ಸಾಕ್ಷಿದಾರರಾದ ಚಾಸಾ-8 ಮತ್ತು ಚಾಸಾ-9 ರವರು ಇದ್ದಿದ್ದು ಆಗ ಪೋಲೀಸರು ಅಲ್ಲಿ ಮಹಜರ್ ಕ್ರಮ ಜರುಗಿಸಿರುತ್ತಾರೆ, ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಸದರಿ ಮಹಜರ್ ಅನ್ನು ಬೆಳಿಗ್ಗೆ 10.15-11.30 ಗಂಟೆಯ ಒಳಗೆ ಜರುಗಿಸಿರುತ್ತಾರೆ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ

ಸಾಕ್ಷಿ ಅದು ಮೇಲೆ ಹೇಳಿದಂತೆ ಪೋಲೀಸರು ಜರುಗಿಸಿದ ಮಹಜರ್ ಎಂದು ಗುರುತಿಸಿ, ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಸದರಿ ದಾಖಲೆಯನ್ನು ಗುರುತಿಸಿದ ಮೇರೆಗೆ ಸದರಿ ಮಹಜರ್ ಅನ್ನು **ನಿ.ಪಿ.-2** ಎಂದು, ಸಾಕ್ಷಿಯ ಸಹಿಯನ್ನು **ನಿ.ಪಿ.-2(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್.ಆರ್.ಕೆ. ವಕೀಲರಿಂದಃ**

ನಾನು ಆಪ್ತ ಸಮಾಲೋಚಕಿಯಾಗಿ ಕೆಲಸ ಮಾಡುತ್ತಿದ್ದ ಬಗ್ಗೆ ಪೋಲೀಸರಿಗೆ ದಾಖೆ ನೀಡಿರುವುದಿಲ್ಲ. ಸಾಕ್ಷಿ ಮುಂದುವರಿದು ಪೋಲೀಸರು ಅದನ್ನು ಕೇಳಿರುವುದಿಲ್ಲ ಆ ಕಾರಣಕ್ಕಾಗಿ ನೀಡಿರುವುದಿಲ್ಲವೆಂದು ನುಡಿಯುತ್ತಾರೆ. ನಿ.ಪಿ.-1 ರಲ್ಲಿ ನಾನು ಸಹಿ ಮಾಡಿದ ಕಡೆ ನಾನು ಯಾವ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದೇನೆಂಬುದನ್ನು ನಮೂದಿಸಿರುವುದಿಲ್ಲವೆಂದರೆ ಸರಿ. ಸಾಕ್ಷಿಯು ಮುಂದುವರಿದು ಅದು ನಮ್ಮ ಸಂಸ್ಥೆಯ ಸೀಲು ಆಗಿದ್ದು, ಅದನ್ನೇ ಉಪಯೋಗಿಸುತ್ತೇವೆಂದು ನುಡಿಯುತ್ತಾರೆ. ಸದರಿ ನಿ.ಪಿ.-1 ದೂರಿನಲ್ಲಿ ನಮ್ಮ ಕಛೇರಿ ಇರುವ ಸ್ಥಳವನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಸದರಿ ಸೀಲ್ ನಲ್ಲಿ ಸಾಂತ್ವಾನ ಮಹಿಳಾ ಸಹಾಯವಾಣಿ ಕೇಂದ್ರ ಎಂದು, ಚಾಮುಂಡೇಶ್ವರಿ ಮಹಿಳಾ ಸಂಸ್ಥೆ, ಹೆಚ್.ಡಿ. ಕೋಟೆ ಎಂದು ನಮೂದಿರುತ್ತದೆಂದು ನುಡಿಯುತ್ತಾರೆ. ನಾನು 1ನೇ ಆರೋಪಿಯ ಜೊತೆ ಸಮಾಲೋಚನೆ ನಡೆಸಿದ ಬಗ್ಗೆ ಲೆಡ್ಜರ್ ನಲ್ಲಿ ನಮೂದಿಸಿರುವ ದಾಖಲೆಯನ್ನು ದೂರಿನ ಜೊತೆ ಪೋಲೀಸರಿಗೆ ನೀಡಿರುವುದಿಲ್ಲ. ನಿ.ಪಿ.-1 ದೂರನ್ನು ಪೋಲೀಸರಿಗೆ ನೀಡುವ

ಮೊದಲು ನಮ್ಮ ಮೇಲಾಧಿಕಾರಿಗಳಿಂದ ಈ ಬಗ್ಗೆ ಮೌಖಿಕ ಅನುಮತಿ ಪಡೆದುಕೊಂಡಿರುತ್ತೇನೆ. ಸದರಿ ಅನುಮತಿ ಪಡೆದ ವಿಚಾರವನ್ನು ನಿ.ಪಿ.-1 ದೂರಿನಲ್ಲಿ ನಮೂದಿಸಿರುವುದಿಲ್ಲ. 1 ನೇ ಆರೋಪಿಯ ಮನೆ ನಮ್ಮ ಕಛೇರಿಯಿಂದ ಸ್ವಲ್ಪ ದೂರದಲ್ಲಿದ್ದು ಮೊದಲಿನಿಂದಲೂ ನನಗೆ ಅವರ ಪರಿಚಯ ಇರುತ್ತದೆ. ನಾನು 1 ನೇ ಆರೋಪಿಯ ಮನೆಗೆ ಹೋದಾಗ ಅವರ ಮನೆಯಲ್ಲ್ಲಿ 1 ನೇ ಆರೋಪಿ, ಅವರ ಗಂಡ ಹಾಗು ಇನ್ನೂ ಯಾರೋ ಇಬ್ಬರು ವ್ಯಕ್ತಿ ಇದ್ದಿದ್ದರು. ನಾನು 1 ನೇ ಆರೋಪಿಯ ಮನೆಗೆ ಹೋಗುವ ಪೂರ್ವದಲ್ಲಿ ಹೆಚ್.ಡಿ. ಕೋಟೆಯ ಸರ್ಕಾರಿ ಆಸ್ಪತ್ರೆಗೆ ಹೋಗಿ ಅಲ್ಲಿ 1 ನೇ ಆರೋಪಿಗೆ ದಿನಾಂಕಃ 05.04.2022 ರಂದು ಮಗು ಜನಿಸಿದ ಬಗ್ಗೆ ಯಾವುದೇ ದಾಖಲೆ ಪಡೆದುಕೊಂಡಿರುವುದಿಲ್ಲ. ನಾನು ಸದರಿ ದಿನದಂದು 1 ನೇ ಆರೋಪಿಯ ಮನೆಗೆ ಹೋಗುವಾಗ ಬೆಳಿಗ್ಗೆ ಸುಮಾರು 09.30 ಗಂಟೆ ಆಗಿರುತ್ತದೆ. ಸಾಮಾನ್ಯವಾಗಿ ಒಬ್ಬ ಮಹಿಳೆಗೆ ನಾರ್ಮಲ್ ಹೆರಿಗೆ ಆದಲ್ಲಿ ಸುಮಾರು 05-06 ದಿನ ಆಸ್ಪತ್ರೆಯಲ್ಲಿ ಇರುತ್ತಾರೆಂದರೆ ಸಾಕ್ಷಿಯು ಅವರವರ ದೈಹಿಕ ಶಕ್ತಿಯ ಮೇಲೆ ಅವು ಅವಲಂಭಿತವಾಗಿರುತ್ತದೆಂದು ನುಡಿಯುತ್ತಾರೆ. ನಾನು 1 ನೇ ಆರೋಪಿಯ ಮನೆಗೆ ಹೋಗಿ ಆಕೆಯ ಜೊತೆ ಸಮಾನಲೋಚನೆ ನಡೆಸಿದ ಬಗ್ಗೆ ನಾನು ಪೋಲೀಸರಿಗೆ ನೀಡಿದ್ದೆ ಎಂದು ಹೇಳಲಾದ ದೂರಿನಲ್ಲಿ ತಿಳಿಸಿರುವುದಿಲ್ಲ, ಇದೇ ಮೊದಲ ಬಾರಿಗೆ ಬಾರಿಗೆ ನ್ಯಾಯಾಲಯದಲ್ಲಿ ತಿಳಿಸುತ್ತಿದ್ದೇನೆ ಎಂದರೆ ಸರಿ. ಅದೇ ರೀತಿ 1 ನೇ ಆರೋಪಿಯನ್ನು ಸಮಾಲೋಚಿಸಿದಾಗ ಆಕೆ ಮಗುವನ್ನು ಮಾರಾಟ ಮಾಡಿರುವುದಿಲ್ಲ, ಸಂಬಂಧಿಕರ ಮನೆಗೆ ಕೊಟ್ಟಿರುವುದಾಗಿ ಹಾಗು ನಾನು ಆಕೆಯಲ್ಲಿ ಮಗುವನ್ನು ತಕ್ಷಣ ತರಿಸುವಂತೆ ತಿಳಿಸಿದ್ದು, ಆ

ಪ್ರಕಾರ ಆಕೆ ಸುಮಾರು 01.00 ಗಂಟೆಯಲ್ಲಿ ಮಗುವನ್ನು ತರಿಸಿದ ವಿಚಾರವನ್ನು ನನ್ನ ದೂರಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಮಗುವನ್ನು ನಂತರ ರಕ್ಷಣೆ ಮಾಡಿ ಮಕ್ಕಳ ಕಲ್ಯಾಣ ಸಮಿತಿಗೆ ನೀಡಿದ ಬಗ್ಗೆಯೂ ಸಹ ದೂರಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ನಾನು ಸದರಿ ಎಲ್ಲಾ ಪ್ರಕ್ರಿಯೆಯನ್ನು ಮುಗಿಸುವಾಗಿ ಮಧ್ಯಾಹ್ನ ಸುಮಾರು 03.30 ಆಗಿರಬಹುದು. ನಾನು ಪೋಲೀಸರಿಗೆ ದೂರನ್ನು ಕೊಡುವಾಗ ಎಷ್ಟು ಗಂಟೆ ಆಗಿತ್ತು ಎಂದು ನನಗೆ ಸರಿಯಾಗಿ ನೆನಪಿರುವುದಿಲ್ಲ. 1 ನೇ ಆರೋಪಿಗೆ ಈ ಪ್ರಕರಣದ ಮಗು 5 ನೇ ಮಗುವಾಗಿರುತ್ತದೆ. 1 ನೇ ಆರೋಪಿಗೆ ಕೇವಲ 4 ಮಕ್ಕಳಿದ್ದು, 5 ನೇ ಮಗುವಿಗೆ ಯಾವುದೇ ಜನನ ನೀಡಿರುವುದಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಯಾವುದೇ ಘಟನೆ ನಡೆಯದೇ ಇದ್ದಾಗ್ಯೂ ಸಹ ಊಹಪೋಹಗಳ ಆಧಾರದ ಮೇಲೆ ಆರೋಪಿತರ ವಿರುದ್ಧ ಸುಳ್ಳು ದೂರನ್ನು ದಾಖಲಿಸಿರುತ್ತೇನೆಂದರೆ ಸರಿಯಲ್ಲ. ಮಹಜರ್ ಗೆ ಬರುವಂತೆ ಪೋಲೀಸರು ನನಗೆ ಯಾವುದೇ ಲಿಖಿತ ನೋಟೀಸ್ ನ್ನು ನೀಡಿರುವುದಿಲ್ಲ, ಸಾಕ್ಷಿಯು ಮುಂದುವರಿದು ಫೋನ್ ಕರೆ ಮಾಡಿ ತಿಳಿಸಿರುತಾರೆಂದು ನುಡಿಯುತ್ತಾರೆ. ನಾನು ಮಹಜರ್ ಗೆ ಹೋದ ಸಮಯದಲ್ಲಿ ಅಲ್ಲಿ ಸುಮಾರು 10-15 ಜನ ಸೇರಿದ್ದರು. ನಾನು ಮಹಜರ್ ಗೆ ಹೋಗಿದ್ದೆ ಎಂದು ಹೇಳಲಾದ ಸಮಯದಲ್ಲಿ 1 ನೇ ಆರೋಪಿ ಹಾಗು ಮಗು ಅಲ್ಲಿಯೇ ಇದ್ದರು ಎಂದರೆ ಸಾಕ್ಷಿಯು ನನಗೆ ಆ ಬಗ್ಗೆ ಈಗ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರಿದು ದೂರನ್ನು ನೀಡಿದ ದಿನ ನಾನು ಮಗುವನ್ನು ಮಕ್ಕಳ ಕಲ್ಯಾಣ ಸಮಿತಿಗೆ ಹಸ್ತಾಂತರಿಸಿದ್ದು, ಮರುದಿನ ವಾಪಸ್

ಬಂದಿರುತ್ತದೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.-2 ಮಹಜರ್ ನಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿರುತ್ತದೆ. ಆ ಸಮಯದಲ್ಲಿ ಯಾವುದೇ ಕಚ್ಚಾ ನಕಾಶೆ ತಯಾರಿಸಿರುತ್ತಾರೋ ಇಲ್ಲವೋ ಎಂದು ನನಗೆ ಈಗ ನೆನಪಿರುವುದಿಲ್ಲ. ಚಾಸಾ-8 ಮತ್ತು ಚಾಸಾ-9 ರವರು 1 ನೇ ಆರೋಪಿಯ ಅಕ್ಕ-ಪಕ್ಕದ ಮನೆಯವರಾಗಿರುತ್ತಾರೆ. ನಾನು ಯಾವುದೇ ಕೃತ್ಯ ನಡೆಯಿತು ಎಂದು ಹೇಳಿದ ಸ್ಥಳಕ್ಕೆ ಹೋಗಿರುವುದಿಲ್ಲ ಹಾಗು ಅಲ್ಲಿ ಪೋಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ, ಬದಲಾಗಿ ಈ ಪ್ರಕರಣಕ್ಕೋಸ್ಕರ ಪೋಲೀಸರು ನಿ.ಪಿ.-2 ಮಹಜರ್ ನ್ನು ಠಾಣೆಯಲ್ಲಿಯೇ ಸೃಷ್ಟಿಸಿದ್ದು, ಅದಕ್ಕೆ ನಾನು ಠಾಣೆಯಲ್ಲೆಯೇ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. 1 ನೇ ಆರೋಪಿ ತನ್ನ ಮಗುವನ್ನು ಯಾರಿಗೂ ಮಾರಾಟ ಮಾಡಿರುವುದಿಲ್ಲ ಹಾಗು ಮಾರಾಟ ಮಾಡಲು ಪ್ರಯತ್ನಿಸಿರುವುದಿಲ್ಲ ಎಂದರೆ ಸಾಕ್ಷಿಯು ತನಗೆ ಸಾರ್ವಜನಿಕರಿಗೆ ಆ ರೀತಿ ಮಾಹಿತಿ ಬಂದಿರುವುದಾಗಿ ನುಡಿಯುತ್ತಾರೆ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**